**ದಿಃ 18.07.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ವಾದಿ ಪರ ವಕೀಲರವರಿಂದ:**

ನಾನು ಈ ದಾವೆಯಲ್ಲಿ ವಾದಿಯಾಗಿರುತ್ತೇನೆ. ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ನಿಜ ಇವೆ. ನಂತರ ಓದಿ, ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ಈ ಕೆಳಗಿನ ದಾಖಲೆಗಳನ್ನು ಹಾಜರು ಪಡಿಸಿ ನಿಶಾನೆಗೊಳಿಸಿಕೊಂಡಿರುತ್ತೇನೆ.

ನಿಪಿ–1 ರಿಂದ 3 – ವ್ಯಾಸಾಂಗ ಪ್ರಮಾಣ ಪತ್ರಗಳು

ನಿಪಿ–4– ನನ್ನ ಆಧಾರ ಕಾರ್ಡ

ನಿಪಿ–5– ನನ್ನ ಜನನ ಪ್ರಮಾಣ ಪತ್ರ

ನಿಪಿ–6– ನನ್ನ 10ನೇ ತರಗತಿಯ ಅಂಕಪಟ್ಟಿ ಪ್ರಮಾಣ ಪತ್ರ

ನಿಪಿ–7– ನನ್ನ ಪಿಯುಸಿ ಅಂಕಪಟ್ಟಿ ಪ್ರಮಾಣ ಪತ್ರ ಎಂದು ಗುರುತಿಸಲಾಯಿತು

**ಪಾಟೀ ಸವಾಲುಃ ಪ್ರತಿವಾದಿ ಮಾನ್ಯ ಎಜಿಪಿಯವರಿಂದ:**

1) ನಾನು ಈಗ ಪದವಿಯನ್ನು ಓದುತ್ತಿದ್ದೇನೆ. ನನ್ನ ಮುಖ್ಯ ವಿಚಾರಣೆ ಪಮಾಣ ಪತ್ರದಲ್ಲಿಯ ವಿಷಯಗಳು ಗೊತ್ತಿವೆ. ಪ್ರಸ್ತೂತ ದಾವೆಯನ್ನು ನಾನು ಹೇಸರು ಮತ್ತು ಜನ್ಮ ದಿನಾಂಕ ತಿದ್ದುಪಡಿ ಮಾಡಿಕೊಳ್ಳಲು ಸಲ್ಲಿಸಿರುತೇನೆ, ನನ್ನ ತಂದೆ ತಾಯಿ ನೀಡಿದ ಮಾಹಿತಿಯ ಮೆರೆಗೆ ಪ್ರತಿವಾದಿಗಳು ನನ್ನ ಹೆಸರು ಮತ್ತು ಜನ್ಮ ದಿನಾಂಕವನ್ನು ನಮೂದು ಮಾಡಿಕೊವ್ರಂಡಿರುತ್ತಾರೆ ಎಂದರೆ ಸರಿಯಲ್ಲ . ಸಾಕ್ಷಿಗೆ ಅವರ ಶಾಲಾ ದಾಖಲಾತಿ ರಜಿಸ್ಟರನ ಪ್ರತಿ ತೋರಿಸಿ ಅದರಲ್ಲಿ ಅವರ ಹೆಸರು ಮತ್ತು ಜನ್ಮ ದಿನಾಂಕ ನಮಾದಾಗಿರುವುದು ಸರಿ

ಇರುತ್ತದೇ ಎಂದು ಕೇಳಲಾಗಿ, ಸಾಕ್ಷಿ ಅವುಗಳು ತಪ್ಪಾಗಿ ನಮೂದಾಗಿದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ಸರಿಯಾಗಿ ನಮೂದಾಗಿದ್ದರು ಸಹ ನಾನು ತಪ್ಪಾಗಿ ನಮೂದಾಗಿರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಾನು 1 ನೇ ತರಗತಿಯಿಂದ 4 ನೇ ತರಗತಿಯವರೆಗೆ 4 ನೇ ಪ್ರತಿವಾದಿ ಶಾಲೆಯಲ್ಲಿ ಓದಿರುತ್ತೇನೆ. 5ನೇ ತರಗತಿಯನ್ನು ನಾನು 5ನೇ ಪ್ರತಿವಾಯ ಶಾಲೆಯಲ್ಲಿ ಓದಿರುತ್ತೇನೆ. 6 ರಿಂದ 8ನೇ ತರಗತಿಯನ್ನು 6 ನೇ ಪ್ರತಿವಾದಿಯ ಶಾಲೆಯಲ್ಲಿ ಓದಿರುತ್ತೇನೆ. ಸದರಿ ಶಾಲೆಗಳಿಗೆ ಪ್ರವೇಶ ಪಡೇಯುವಾಗ ನನ್ನ ಹೆಸರು ಮತ್ತು ಜನ್ಮ ದಿನಾಂಕ ತಪ್ಪಾಗಿ ನಮೂದಾಗಿದ್ದ ಬಗ್ಗೆ ನನ್ನ ಗಮನಕ್ಕೆ ಬಂದಿರುವುದಿಲ್ಲ. ಸದರಿ ದಾಲೆಗಳ ದಾಖಲೆಗಳಲ್ಲಿ ನನ್ನ ಹೆಸರು ಹಾಗೂ ಜನ್ದ ದಿನಾಂಕ ಸರಿಯಾಗಿ ನಮೂದಾಗಿದ್ದರಿಂದ ನಾನು ಅವುಗಳನ್ನು ಆಗಲೇ ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿಗಳು ತಪ್ಪಾಗಿ ನಮೂದಾಗಿರುವ 4-5 ತಿಂಗಳ ಹಿಂದೆ ನನ್ನ ಗಮನಕ್ಕೆ ಬಂದಿರುತ್ತದೆ. ಪ್ರತಿವಾದಿಗಳು ನನ್ನ ಪಾಲಕರು ಮಾಹಿತಿ ನೀಡಿದ ಮೆರೆಗೆ ಸದರಿಗಳನ್ನು ನಮೂದು ಮಾಡಿಕೊಂಡಿದ್ದು ಅವರ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸರಿಯಾದ ಹೇಸರು ಮತ್ತು ಜನ್ಮ ದಿನಾಂಕ ತೋರಿಸಲು ಆಧಾರ ಕಾರ್ಡ ಹಾಗೂ 10 ಮತ್ತು ಪಿಯುಸಿಯ ಅಂಕಪಟ್ಟಿ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುತ್ತೇನೆ. ನಿಪಿ-6ರಲ್ಲಿ ಶಾಲೆಯವರೆ ಸರಿಯಾಗಿ ಮಾಹಿತಿಯನ್ನು ನಮೂದು ಮಾಡಿಕೊಡಿದ್ದು ನಾನು ಮಾಹಿತಿ ನೀಡಿರುವುದಿಲ್ಲ. ನಮ್ಮ ತಪ್ಪನ್ನು ಮುಚ್ಚಿ ಹಾಕಿಕೊಳ್ಳುವುದಕ್ಕಾಗಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ಚೈತ್ರಾ ಕುಲಕರ್ಣಿ)
ಹೆ.ದಿ.&ನ್ಯಾದಂ., ಗೋಕಾಕ.